# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

## ಎಸ್ ಸಿ ನಂ 56/2023

| | | |
|---|---|---|
| **ಪಿರ್ಯಾದಿಃ** | ವಿರುದ್ಧ | **ಆರೋಪಿಃ** |
| ಅರೇಹಳ್ಳಿ ಪೊಲೀಸರು | | ಶಂಕರ್ ಮಂಜುಗೌಡ ಹಾಗೂ ಇತರರು |

**ಶ್ರೀ ಎಸ್.ಎ ಹಿದಾಯತ್ ಉಲ್ಲಾ ಷರೀಪ್,** 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ ಆದ ನಾನು ಆರೋಪಿತರಾದ

| | |
|---|---|
| 2ನೇ ಆರೋಪಿ | ವಿಜಯಕುಮಾರ್ ಜಿ ಆರ್ ಬಿನ್ ರಾಮೇಗೌಡ, ಡ್ರೈವರ್, 35 ವರ್ಷ, ಗುಡ್ಡದ ತೆರಣ್ಯ ಗ್ರಾಮ, ಹಾಸನ ತಾಲ್ಲೂಕು. |
| 3ನೇ ಆರೋಪಿ | ಮುನ್ನ ಕೋಟ್ಯನ್ ಬಿನ್ ಜೆನ್ನಪ್ಪ ಕೋಟ್ಯನ್, 40 ವರ್ಷ, ಎಲೆಕ್ಟ್ರೀಷಿಯನ್, ಪಾಟಿಚಾಲ್, ಕೌಸಮುನ್ರ. ಥಾನೆ ಜಿಲ್ಲೆ. |
| 6ನೇ ಆರೋಪಿ | ಅಬ್ದುಲ್ ರಜಾಕ್ ಬಿನ್ ಮಹಮದ್ ಶೇಟ್, 45 ವರ್ಷ, ವ್ಯಾಪಾರ, ರತಿನಮಹಲ್ ಕಾಲೋನಿ, ಆಜಾದ್ ನಗರ, ಚೆನ್ನೆ |

**ನಿಮ್ಮಗಳ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 18.06.2022 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಅರೇಹಳ್ಳಿ ಠಾಣಾ ವ್ಯಾಪ್ತಿಯ ಬಿಕ್ಕೋಡು ಟೌನ್ ಮಧುಘಟ್ಟ ಸರ್ಕಲ್ ನಲ್ಲಿ ಚಾಸಾ–1 ಎಸ್ ಎನ್ ಶ್ರೀಕಾಂತ್ ಹಳೇಬೀಡು ವೃತ್ತದ ಸಿಪಿಐ ರವರು ಅವರ ಸಿಬ್ಬಂದಿಯೊಂದಿಗೆ

ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಕಾಲದಲ್ಲಿ ಆರೋಪಿ–2 ಹಾಗೂ 3 ಆದ ನೀವು ಈ ಪ್ರಕರಣದಲ್ಲಿ ಬೇರ್ಪಡಿಸಲಾಗಿರುವ 1, 4 ಹಾಗೂ 5ನೇ ಆರೋಪಿಗಳೊಂದಿಗೆ ಸೇರಿ ಟಿ ಎನ್ 23.ಬಿಟಿ.9379 ಟಾಟಾ ಸುಮೋ ವಾಹನದಲ್ಲಿ ಸಕಲೇಶಪುರದಿಂದ ಬೇಲೂರು ಕಡೆಗೆ ಹೋಗುತ್ತಿದ್ದು ಮೇಲ್ಕಂಡ ವಾಹನವನ್ನು ನಿಲ್ಲಿಸಿ ಪರಿಶೀಲಿಸಲಾಗಿ ನೀವು ಸದರಿ ವಾಹನದಲ್ಲಿ ದರೋಡೆ ಮಾಡುವ ಉದ್ದೇಶದಿಂದ ಆಯುಧಗಳನ್ನು ಹಾಗೂ ಕಳ್ಳತನ ಮಾಡುವ ಉದ್ದೇಶದಿಂದ ವಾಹನಗಳನ್ನು ಬಿಚ್ಚಲು ಬಳಸುವ ವಸ್ತುಗಳನ್ನು ಹೊಂದಿದ್ದು, ದರೋಡೆ ಮಾಡಲು ಸಿದ್ಧತೆ ಮಾಡಿಕೊಂಡಿರುವುದು ಕಂಡು ಬಂದಿದ್ದು ಆರೋಪಿ–2 ಹಾಗೂ 3 ಆದ ನೀವು ಭಾರತೀಯ ದಂಡ ಸಂಹಿತೆ ಕಲಂ.399 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–2 ಹಾಗೂ 3 ಆದ ನೀವು ಈ ಪ್ರಕರಣದಲ್ಲಿ ಬೇರ್ಪಡಿಸಲಾಗಿರುವ 1, 4 ಹಾಗೂ 5ನೇ ಆರೋಪಿಗಳೊಂದಿಗೆ ಸೇರಿ ಟಿ ಎನ್ 23.ಬಿಟಿ. 9379 ಟಾಟಾ ಸುಮೋ ವಾಹನದಲ್ಲಿ ಸಕಲೇಶಪುರದಿಂದ ಬೇಲೂರು ಕಡೆಗೆ ಹೋಗುತ್ತಿದ್ದು ಮೇಲ್ಕಂಡ ವಾಹನವನ್ನು ಚಾಸಾ–1 ಎಸ್ ಎನ್ ಶ್ರೀಕಾಂತ್, ಸಿಪಿಐ, ಹಳೇಬೀಡು ವೃತ್ತ ರವರು ತಡೆದು ಪರಿಶೀಲಿಸಲಾಗಿ ನೀವು ಸದರಿ ವಾಹನದಲ್ಲಿ ದರೋಡೆ ಮಾಡುವ ಉದ್ದೇಶಕ್ಕಾಗಿ ಸೇರಿ ದರೋಡೆ ಮಾಡಲು ಆಯುಧಗಳನ್ನು ಹಾಗೂ ಕಳ್ಳತನ ಮಾಡುವ ಉದ್ದೇಶದಿಂದ ವಾಹನಗಳನ್ನು ಬಿಚ್ಚಲು ಬಳಸುವ ವಸ್ತುಗಳನ್ನು ಹೊಂದಿದ್ದು, ನೀವು ಭಾರತೀಯ ದಂಡ ಸಂಹಿತೆ ಕಲಂ.402 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಈ ಪ್ರಕರಣದಲ್ಲಿ ಬೇರ್ಪಡಿಸಲಾಗಿರುವ 1, 4 ಹಾಗೂ 5ನೇ ಆರೋಪಿಗಳೊಂದಿಗೆ ಸಮಾನ ಉದ್ದೇಶದಿಂದ ಸೇರಿದ ಆರೋಪಿ–2 ಹಾಗೂ 3 ಆದ ನೀವು ನೀವು 6 ಹಾಗೂ 7ನೇ ಆರೋಪಿಗಳ ಪ್ರೇರೇಪಣೆಯಿಂದ ಟಿ ಎನ್ 23.ಬಿಟಿ.9379 ನೊಂದಾವಣಿ ಸಂಖ್ಯೆಯ ಕಳವು ಮಾಡಿರುವ ಟಾಟಾ ಸುಮೋ ವಾಹನವನ್ನು ಬಳಸಿಕೊಂಡು ಒಂದು ದ್ವಿಚಕ್ರ ವಾಹನ ಹಾಗೂ 11 ನಾಲ್ಕು ಚಕ್ರದ ವಾಹನಗಳನ್ನು ಕಳವು ಮಾಡಿದ್ದು ನೀವು ಭಾರತೀಯ ದಂಡ ಸಂಹಿತೆ ಕಲಂ.379 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಈ ಪ್ರಕರಣದ 6ನೇ ಆರೋಪಿಯಾದ ನೀವು ಈ ಪ್ರಕರಣದಲ್ಲಿ

ಬೇರ್ಪಡಿಸಿರುವ 7ನೇ ಆರೋಪಿ ಮಹಮದ್ ಇಬ್ರಾಹಿಂ ನೊಂದಿಗೆ ಸಮಾನ ಉದ್ದೇಶದಿಂದ ಸೇರಿ ಈ ಪ್ರಕರಣದ 1 ರಿಂದ 5ನೇ ಆರೋಪಿಗಳಿಂದ ಆರು ಕಳವು ಮಾಡಿದ ನಾಲ್ಕು ಚಕ್ರದ ವಾಹನಗಳನ್ನು ಸ್ವೀಕರಿಸಿ ರೂಢೀಗತವಾಗಿ ಕಳವು ಮಾಲಿನ ವ್ಯವಹಾರ ನಡೆಸಿದ್ದು 6ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.413 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ಆರೋಪಗಳು ನನ್ನ ಸಂಜ್ಞೆಗೆ ಒಳಪಡುತ್ತವೆ ಹಾಗೂ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

ದಿಃ- 15.03.2025.

**(ಎಸ್.ಎ ಹಿದಾಯತ್ ಉಲ್ಲಾ ಷರೀಪ್)**
**2ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**